(SRI A. G. RAMACHANDRA RAO.)

Sl. No.	Name of the District	Number of Middle Schools	Number of High Schools	Number of I year Classes in these High Schools
1	Bangalore Corporation Area ...	71	43	79
2	Bangalore District ...	91	19	31
3	Bellary District ...	1	17	36
4	Chickmagalur District ...	57	14	23
5	Chitaldrug District ...	74	24	43
6	Hassan District ...	62	22	35
7	Kolar District	69	19	51
8	Mandya District ...	66	16	26
9	Mysore District ...	106	37	84
10	Shimoga District ...	76	24	44
11	Tumkur District ...	94	25	48

ಶ್ರೀ ಬಿ. ಹುಚ್ಚೇಗೌಡ.—ಮಿಡ್ಲ್ ಸ್ಕೂಲುಗಳು ಎಷ್ಟಿವೆಯೆಂಬುದಕ್ಕೆ 700 ಎಂದು ಹೇಳಿದ್ದೀರಿ. N. T. M. ಮತ್ತು IV Year Class ಗಳಲ್ಲಿ ಪಾಸಾದವರು ಎಷ್ಟೆಂಬುದನ್ನು ಹೇಳುತ್ತೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್. N. T. M. ವಿಚಾರ ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡ.—(ಬ) ಪ್ರಶ್ನೆಯಲ್ಲೇ ಕೇಳಿಸ್ಲೀನಲ್ಲಾ.

Sri A. G. RAMACHANDRA RAO.—That does not relate to N.T.M. Schools.

ಶ್ರೀ ಬಿ. ಹುಚ್ಚೇಗೌಡ.—ಇಷ್ಟರಲ್ಲಿ, ಒಟ್ಟು ಎಷ್ಟು ಹುಡುಗರು ಹೈಸ್ಕೂಲಿಗೆ ಹೋಗಲು eligible ಆದರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಜನವರಿಯಲ್ಲಿ ಕ್ಲಾಸಿಗೆ ಸೇರಿ ಡಿಸೆಂಬರಿನಲ್ಲಿ ಪರೀಕ್ಷೆ ಮಾಡಿದ್ದಾರೆ. ಆ ಬಗ್ಗೆ ಎರಡ್ನಾ information ನಮಗೆ ಇನ್ನೂ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಹೇಳಿರುವ 263 ಹೈಸ್ಕೂಲುಗಳಲ್ಲಿರುವ 500 first year ಕ್ಲಾಸ್ ಗಳಲ್ಲಿ ಒಟ್ಟು ಎಷ್ಟು admissions ಆಗಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು. ಆಮೇಲೆ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಜನ apply ಮಾಡಿದ್ದರು, ಎಷ್ಟು ಜನರಿಗೆ admissions ಸಿಕ್ಕಿತು ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಈ ವರ್ಷ ಎಷ್ಟು ಹೈಸ್ಕೂಲುಗಳು sanction ಆಗಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾಲ್ಕು ಸರ್ಕಾರಿ ಹೈಸ್ಕೂಲುಗಳು. ಪ್ರೈವೇಟ್ ಸ್ಕೂಲುಗಳೆಷ್ಟೆಂಬುದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—1956-57ಕ್ಕೆ ಸ್ಯಾಂಕ್ಷನ್ ಆಗಿದೆಯಲ್ಲಾ ಅದನ್ನು start ಮಾಡಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಮುಂದೇನಾದರೂ start ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವರ್ಷಾಂತ್ಯದಲ್ಲಿ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಎರಡು ಟಿರ್ಮ್ಸ್‌ಗಳೂ ಇಲ್ಲದಿದ್ದರೆ ಹೇಗಾಗುತ್ತದೆ ?

District Board and Municipal High Schools (Appointing and transferring authorities with respect to Teachers).

Q.—122. Sri D. R. KARI GOWDA (Hassan).—

Will the Government be pleased to state :—

(*a*) how many District Board and Municipal High Schools are there in Mysore State ;

(*b*) who is the appointing and transferring authority of the teachers in those schools ?

A.—Sri A. G. RAMACHANDRA RAO (Minister for Law and Education).—

(*a*) (1) District Board High Schools. ... 53

(2) Municipal High Schools. ... 68

(*b*) (1) *Appointing authority.*—The Managing Committees of the respective High Schools will appoint all members of the Superior Service of the High Schools except the Head Masters who will be appointed by the Director of Public Instruction in Mysore from among the teachers working in

those institutions generally according to seniority.

(2) *Transferring authority.*—The Director of Public Instruction.

ಶ್ರೀ ಡಿ. ಆರ್. ಕರಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳಿಂದ ಮುನಿಸಿಪಲ್ ಹೈಸ್ಕೂಲಿಗೂ ಮುನಿಸಿಪಲ್ ಹೈಸ್ಕೂಲಿನಿಂದ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೂ ಉಪಾಧ್ಯಾಯರುಗಳನ್ನು ವರ್ಗ ಮಾಡ ಬಹುದೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥಾದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಾಸನ ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಾಯರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ transfer ಮಾಡ ಬಹುದೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಬಹುದು.

ಶ್ರೀ ಡಿ. ಆರ್. ಕರಿಗೌಡ.—ಈ ಬಗ್ಗೆ ಟ. ಎ. ಮತ್ತು ಡಿ. ಎ. ಮುಂತಾದುವುಗಳನ್ನು ಯಾರು meet ಮಾಡುತ್ತಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡಿ ಹೇಳಬೇಕು.

ಶ್ರೀ ಡಿ. ಆರ್. ಕರಿಗೌಡ.—ಹೀಗೆ ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ transfer ಮಾಡಿದಾಗ ಅನೇಕ ಉಪಾಧ್ಯಾಯರುಗಳಿಗೆ ತೊಂದರೆ ಯಾಗುತ್ತಿದೆಯೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಸಂಸ್ಥಾನಾಮಳಿ ಸೀನಿಯಾರಿಟಿಯನ್ನು ಗೊತ್ತು ಮಾಡುವಾಗ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲುಗಳಿಗೂ ಮತ್ತು ಮುನಿಸಿಪಲ್ ಹೈಸ್ಕೂಲುಗಳಿಗೂ ಸರ್ಕಾರದವರೇ ಸಹಾಯ ದ್ರವ್ಯ ಕೊಡುತ್ತಿರುವಾಗ, ಆ ಉಪಾಧ್ಯಾಯ ರುಗಳನ್ನೂ ನೌಕರರೆಂದು ಮಾಡಿಕೊಳ್ಳು ವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಅಭಿ ಪ್ರಾಯದಲ್ಲಿ ಒಳ್ಳೆಯದಲ್ಲ.

ಶ್ರೀ ಡಿ. ಆರ್. ಕರಿಗೌಡ.—ಸರ್ಕಾರದವರು ಈ ಹೈಸ್ಕೂಲುಗಳಿಗೆ ಶೇಕಡ ಎಷ್ಟು ಸಹಾಯ ದ್ರವ್ಯ ಕೊಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಶೇಕಡ 75 ರಷ್ಟು.

ಶ್ರೀ ಡಿ. ಆರ್. ಕರಿಗೌಡ.—ಶೇಕಡ 75 ರಷ್ಟು ತಾವು ಕೊಡುತ್ತಿದ್ದರೂ ಈ ಉಪಾಧ್ಯಾಯರುಗಳು ಯಾವಾಗ ಬೇಕೆಂದರೂ ತಮ್ಮನ್ನು ತೆಗೆದು ಹಾಕುತ್ತಿ ರುತ್ತಾರೆಂದು ಸರಿಯಾಗಿ ಕೆಲಸ ಮಾಡುವುದಿಲ್ಲ ವೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡು ವುದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಉಪಾಧ್ಯಾಯರುಗಳಿಗೂ ಮುನಿಸಿಪಲ್ ಹೈಸ್ಕೂಲು ಉಪಾಧ್ಯಾಯರುಗಳಿಗೂ ಒಂದು ಗ್ರೇಡ್ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಿರುವಂತೆ ಜಾಸ್ತಿಪಕ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಅಂದರೆ ಇಲ್ಲಿನ ಗ್ರೇಡಿಗೂ ಸರ್ಕಾರಿ ಹೈಸ್ಕೂಲುಗಳಲ್ಲಿರುವ ಗ್ರೇಡಿಗೂ ವ್ಯತ್ಯಾಸವಿದೆಯೋ ಇಲ್ಲವೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ವ್ಯತ್ಯಾಸವಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ವ್ಯತ್ಯಾಸವಿರು ವುದನ್ನು ನಿರಪಡಿಸುವುದಕ್ಕೇನು ಕಾರ್ಯಕ್ರಮ ಕೈ ಗೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕಸಲ ಪ್ರಯತ್ನ ಮಾಡಿದ್ದೇವೆ. ಆದರೆ ಸ್ಥಳೀಯ ಸಂಸ್ಥೆ ಗಳಲ್ಲಿ ಹಣವಿಲ್ಲದಿರುವುದರಿಂದ ಈ ಪ್ರಶ್ನೆ ಹಾಗೆಯೇ ಬಿದ್ದಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ಹೈಸ್ಕೂಲು ಗಳು ಸರ್ಕಾರದವರು ಕೊಡತಕ್ಕ ಸಹಾಯ ದ್ರವ್ಯ ದಿಂದ ತಾನೆ ನಡೆಯುತ್ತಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರ ದವರ ಸಹಾಯ ಮತ್ತು ಅವರಲ್ಲರತಕ್ಕ ಹಣದಿಂದ ನಡೆಯುತ್ತಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—Common grade ಇಟ್ಟುಕೊಂಡಿರುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೇನೋ ನಮರ್ಪಕವಾಗಿರುತ್ತದೆ. ಆದರೆ ಹಾಗೆ ಮಾಡುವು ದಕ್ಕೆ ಸಾಧ್ಯವಿಲ್ಲದಿರುವುದರಿಂದ ಹಾಗೆಯೇ ಇದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರುಗಳು ಆಗಾಗ್ಗೆ ಸ್ಥಳಾಂತರ ಹೊಂದು ತ್ತಿರುವುದೂ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ appointmentಗಳು ಆಗದಿರುವುದೂ ತಮ್ಮ ಗಮ ನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಕ್ರೂಟ್ ಮೆಂಟ್ ರೂಲ್ಸ್ ಪ್ರಕಾರ ಆಗದಿರುವುದು ನನ್ನ ಗಮ ನಕ್ಕೆ ಬಂದಿದೆ; ಸ್ಥಳಾಂತರವಾಗುತ್ತಿರುವುದು ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲು ಮತ್ತು ಮುನಿಸಿಪಲ್ ಹೈಸ್ಕೂಲುಗಳ ಪೈಕಿ ಎಷ್ಟು ಹೈಸ್ಕೂಲುಗಳು ತಮ್ಮ ಸ್ಕೂಲನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಅರ್ಜಿ ಹಾಕಿ ಕೊಂಡಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅರ್ಜಿಗಳು ಯಾವುವೂ ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ತಮ್ಮಲ್ಲಿ ಹಣಕಾಸಿನ ಸ್ಥಿತಿ ಸರಿಯಾಗಿಲ್ಲವೆಂದು ಹೇಳಿ ಸರ್ಕಾರಕ್ಕೆ ಕಾಗದ ಬರೆದು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಎಷ್ಟು ಸ್ಕೂಲುಗಳು ಕೇಳಿಕೊಂಡಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—ಈ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳಲ್ಲಿ ನರಿಯಾದ ಹಣಕಾಸಿನ ಭದ್ರತೆಯಿಲ್ಲದೆ ನರಿಯಾದ ಉಪಾಧ್ಯಾಯರುಗಳನ್ನು ನೇಮಿಸಿಕೊಳ್ಳುವುದಕ್ಕೆ ತೊಂದರೆಯಾಗಿದೆಯೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಸ್ಥಳೀಯ ಸಂಸ್ಥೆಗಳಲ್ಲಿ ತೊಂದರೆಯಾಗಿರುವುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಪಿ. ಆರ್. ರಾಮಯ್ಯ.—ಹೀಗೆ ಸರಿಯಾಗಿ ಕೆಲಸ ನಡೆಸದೆ ಇದ್ದರೆ ವಿದ್ಯಾರ್ಥಿಗಳಿಗೆ ದ್ರೋಹ ಮಾಡಿದಂತಾಗುತ್ತದೆ ಮತ್ತು ಸರ್ಕಾರದವರೂ ಈ ದ್ರೋಹದಲ್ಲಿ ಭಾಗಿಯಾದಂತಾಗುತ್ತದೆ. ಆದ್ದರಿಂದ ಯಾವಯಾವ ಹೈಸ್ಕೂಲುಗಳ ಪರಿಸ್ಥಿತಿ ತೃಪ್ತಿಕರವಾ ಗಿಲ್ಲವೋ ಅವುಗಳನ್ನು ಸೇರಿಸಿಕೊಳ್ಳುವುದಕ್ಕೆ ಎಷ್ಟು ಹಣ ಬೇಕಾಗುತ್ತದೆಂಬುದನ್ನು ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನು ಳಿದ ಕಾಲು ಭಾಗವನ್ನು ವಹಿಸಿಕೊಳ್ಳಬೇಕಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಅಂದರೆ ಐದು ಲಕ್ಷ ರೂಪಾಯಿಗಳಾಗಬಹುದೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಲ್ಲ. ಲೆಕ್ಕಾಚಾರ ಮಾಡಿ ನೋಡಬೇಕು.

ಶ್ರೀ ಪಿ. ಆರ್. ರಾಮಯ್ಯ.—ಯೋಚನೆ ಮಾಡಿ ಮೂರು ಲಕ್ಷ ರೂಪಾಯಿಗಳ ಒಳಗಿದ್ದರೆ, ವಿದ್ಯಾರ್ಥಿಗಳ ದೃಷ್ಟಿಯಿಂದ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳ ದೃಷ್ಟಿಯಿಂದ ಆ ಸ್ಕೂಲುಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣಕಾಸಿನ ಪ್ರಶ್ನೆ ಮಾತ್ರವಲ್ಲ. ಸಾರ್ವಜನಿಕರು ಎಷ್ಟು ಮೇಲ್ವಿಚಾರಣೆ ವಹಿಸಿ ಕೆಲಸ ಮಾಡುತ್ತಾರೋ ಅಷ್ಟೂ ಉತ್ತಮಗೊಳ್ಳುವ ಸಂಸ್ಥೆಗಳಿವೆ.

ಶ್ರೀ ವಿ. ವೆಂಕಟಪ್ಪ.—ಕೆಲವು ಮುನಿಸಿಪಲ್ ಹೈಸ್ಕೂಲುಗಳಲ್ಲಿ ತಿಂಗಳುಗಟ್ಟಲೆ ಸಂಬಳ ಕೊಡದೇ ಯಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು ; ನನಗೆ ಜ್ಞಾಪಕವಿಲ್ಲ.

ಶ್ರೀ ವಿ. ವೆಂಕಟಪ್ಪ.—ಕುಣಿಗಲ್ ಹೈಸ್ಕೂಲಿನಲ್ಲಿ ಮುಂದಿನ ಒಂದನೆಯ ತಾರೀಖು ಸಂಬಳ ಕೊಡದಿದ್ದರೆ ಕೆಲಸ ಬಿಟ್ಟುಬಿಡುತ್ತೇವೆಂದು ಹೇಳಿರುವುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಮುನಿಸಿಪಲ್ ಹೈಸ್ಕೂಲಲ್ಲ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಅದು ಎಂಥ ಹೈಸ್ಕೂಲು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಖಾಸಗಿ ಹೈಸ್ಕೂಲು.

ಶ್ರೀ ವಿ. ವೆಂಕಟಪ್ಪ.—ಮುನಿಸಿಪಲ್ ಹೈಸ್ಕೂಲುಗಳಲ್ಲಿ ಸಂಬಳಗಳನ್ನು ತಿಂಗಳುಗಟ್ಟಲೆ ಕೊಡದೇ ಯಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ವಿ. ವೆಂಕಟಪ್ಪ.—ಶೇಕಡ 75ರಷ್ಟು ಸೊಬಲಗನ್ನು ಸರ್ಕಾರದಿಂದ ತೆಗೆದುಕೊಳ್ಳುತ್ತಿದ್ದರೂ ಏಕೆ ಸಂಬಳಗಳನ್ನು ಕೊಡುವುದಿಲ್ಲವೆಂದು ವಿಚಾರಿಸಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮುನಿಸಿಪಾಲಿಟಿಗಳಿಗಿರುವ ಆರ್ಥಿಕ ತೊಂದರೆ.

ಶ್ರೀ ವಿ. ವೆಂಕಟಪ್ಪ.—ಸರ್ಕಾರದಿಂದ ಶೇಕಡ 75 ರಷ್ಟು ಭಾಗ ಸಹಾಯವನ್ನು ತೆಗೆದುಕೊಂಡರೂ ಉಪಾಧ್ಯಾಯರುಗಳಿಗೂ ಸಂಬಳ ಕೊಡದಿದ್ದರೆ ತೊಂದರೆಯಲ್ಲವೇ ?

ಉಪಾಧ್ಯಕ್ಷರು.—ಅದು ಗಮನಕ್ಕೆ ಬಂದಿಲ್ಲ ಎಂದು ಉತ್ತರ ಹೇಳಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಇದನ್ನು ವಿಚಾರಿಸುತ್ತೀರಾ ಎಂದು ನಾನು ಕೇಳುವುದು.

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

Sri V. M. MASCARENHAS.—Would the Government insist in all the cases of these institutions to have some sort of compulsory levy ?

Sri A. G. RAMACHANDRA RAO.—We are considering one thing, namely, to make the extent of their quota more or less a permanent levy on the municipalities and utilisethe same.

Schools in receipt of grants-in-aid of Rs. 10,000 and over.

Q.—161. **Sri SYDNEY A. THOMAS** (Nominated).—

Will the Government be pleased to state :—

the names of those schools, private, aided or otherwise, which are in receipt of grants-in-aid of Rs. 10,000 and over, giving the amount of grant for each school (districtwar) ?

A.—**Sri A. G. RAMACHANDRA RAO** (Minister for Law and Education).—

Bangalore City District.

	Rs.	a.
1 Smt. Kamalabai Girls' High School, Civil Station ...	12,892	0
2 St. Joseph's European High School, Bangalore ...	11,533	0
3 Baldwin Boys' High School, Bangalore ...	10,004	0
4 Arya Vidya Shala High School ...	10,510	9

Shimoga District.

1 Mary Imaculate Girls' School, Shimoga ...	10,426	7

Mysore District.

1 D. Banumaiah's High School, Mysore ...	11,715	0
2 Dalvoy High School, Mysore ...	10,946	15

Sri SYDNEY A. THOMAS.—I have no supplementaries.

Sri B. NARAYANASWAMY.—Does the grant include provident fund contribution by the Government ?

***Sri A. G. RAMACHANDRA RAO.**—I want notice for that.

Sri B. NARAYANASWAMY.—I wanted to know whether this grant that is being given to these several High Schools include provident fund contribution given by Government to teachers.

Sri A. G. RAMACHANDRA RAO.—I will enquire and let you know.

Sri M. PALANIYAPPAN.—May I know the basis on which grants-in-aid are given ?